# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ವತಿಯಿಂದ ಕರ್ನಾಟಕ ಮಕ್ಕಳ ನಿಧಿಯನ್ನು ನಿರ್ವಹಣೆ ಮಾಡಲು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

**ಓದಲಾಗಿದೆ:** 1) ಅಧಿಸೂಚನೆ ಸಂಖ್ಯೆ:ಮಮಇ 166 ಮಭಾಬ 2012, ದಿನಾಂಕ:16.01.2013.

2) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರ ಪತ್ರ ಸಂ:ಕೆಎಸ್ಐಸಿಪಿಎಸ್/ಮಕ್ಕಳನಿಧಿ/37/2012-13, ದಿನಾಂಕ:02.08.2013.

3) ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರ ಪತ್ರ ಸಂಖ್ಯೆ:ಕೆಎಸ್ಐಸಿಪಿಎಸ್/ಸಿಡಬ್ಲ್ಯೂಸಿ/ಜೆಜೆಬಿ/30/2012-13 ದಿನಾಂಕ:10.06.2014.

**ಪ್ರಸ್ತಾವನೆ:-**

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಕರ್ನಾಟಕ ನಿಯಮಗಳು, 2010 ನಿಯಮ 90 ರನ್ವಯ ಕರ್ನಾಟಕ ಮಕ್ಕಳ ನಿಧಿಯನ್ನು ನಿರ್ವಹಿಸಲು ನಿಯಮ 90(5) ಮತ್ತು (6)ರನ್ವಯ ಸರ್ಕಾರಿ ಮತ್ತು ಸರ್ಕಾರೇತರ ಪ್ರತಿನಿಧಿಗಳನ್ನೊಳಗೊಂಡು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ವ್ಯವಸ್ಥಾಪಕ ಮಂಡಳಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ:16.01.2013ರ ಅಧಿಸೂಚನೆ ಯಲ್ಲಿ ಎರಡು ವರ್ಷಗಳ ಅವಧಿಗೆ ರಚಿಸಲಾಗಿತ್ತು.

ದಿನಾಂಕ:16.01.2013ರ ಅಧಿಸೂಚನೆಯಲ್ಲಿ ಕರ್ನಾಟಕ ಮಕ್ಕಳ ನಿಧಿಯನ್ನು ನಿರ್ವಹಿಸಲು ರಚಿಸಲಾದ ವ್ಯವಸ್ಥಾಪಕ ಮಂಡಳಿಯು ಈ ಮಕ್ಕಳ ನಿಧಿಯನ್ನು ಯಾವ ರೀತಿ ನಿರ್ವಹಿಸಬೇಕು ಎಂಬ ಬಗ್ಗೆ ಯಾವುದೇ ಮಾರ್ಗಸೂಚಿಗಳು ಇಲ್ಲದೇ ಇರುವುದರಿಂದ ಈ ಮಕ್ಕಳ ನಿಧಿಯನ್ನು ನಿರ್ವಹಿಸಲು ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಕೋರಿ ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ:02.08.2013ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಬೈಲಾ ಪ್ರಕಾರ ಮಾನ್ಯ ಇಲಾಖಾ ಸಚಿವರು ಸೊಸೈಟಿಯ ಸರ್ವ ಸದಸ್ಯರ ಸಭೆಯ ಅಧ್ಯಕ್ಷರಾಗಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಕರ್ನಾಟಕ ಮಕ್ಕಳ ನಿಧಿಯನ್ನು ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕರ್ನಾಟಕ ನಿಯಮಗಳು 2010 ನಿಯಮಗಳನ್ವಯ ಸ್ಥಾಪಿಸಲಾಗಿದ್ದು, ಈ ಕಾಯ್ದೆ ಹಾಗೂ ನಿಯಮಗಳನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯೇ ಅನುಷ್ಠಾನಗೊಳಿಸುತ್ತಿರುವುದರಿಂದ ಕರ್ನಾಟಕ ಮಕ್ಕಳ ನಿಧಿ ನಿರ್ವಹಣೆಯನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಗೆ ವಹಿಸುವಂತೆ ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ:10.06.2014ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ ಸಂಖ್ಯೆ:ಮಮಇ 183 ಮಭಾಬ 2013, ಬೆಂಗಳೂರು ದಿನಾಂಕ:15.10.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ಮಕ್ಕಳ ನಿಧಿಯನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ವತಿಯಿಂದ ನಿರ್ವಹಿಸಲು ಆದೇಶಿಸಿದೆ.

ದೌರ್ಜನ್ಯಕ್ಕೆ ಒಳಗಾದ ಮಕ್ಕಳಿಗೆ ಮುಂದುವರೆದ ವೈದ್ಯಕೀಯ ಚಿಕಿತ್ಸೆ ಹಾಗೂ ಆರೋಗ್ಯ ಸುಧಾರಣೆಗಾಗಿ ವೈದ್ಯರ ಶಿಫಾರಸ್ಸಿನನ್ವಯ ತುರ್ತು ವೈದ್ಯಕೀಯ ಚಿಕಿತ್ಸೆ ಮೊತ್ತ ಒಳಗೊಂಡಂತೆ, ಗರಿಷ್ಠ ರೂ.1,00,000ಗಳವರೆಗೆ ಪರಿಹಾರ ಮಂಜೂರು ಮಾಡಲು **ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರಾದ ಜಿಲ್ಲಾಧಿಕಾರಿ** ಇವರಿಗೆ ಅಧಿಕಾರ ನೀಡಲಾಗಿದೆ.

ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಇವರು ಜಂಟಿ ಖಾತೆಯನ್ನು ತೆರೆದು ಜಿಲ್ಲಾ ಮಕ್ಕಳ ನಿಧಿಯನ್ನು ಸ್ಥಾಪಿಸಿ ನಿರ್ವಹಿಸತಕ್ಕದ್ದು.

ಈಗಾಗಲೇ ರಾಜ್ಯ ಮಟ್ಟದಲ್ಲಿ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕರ್ನಾಟಕ ನಿಯಮ 90(5)(6) ರಂತೆ ರಚಿಸಲಾಗಿರುವ ವ್ಯವಸ್ಥಾಪಕ ಮಂಡಳಿಯು 'ಕರ್ನಾಟಕ ಮಕ್ಕಳ ನಿಧಿ'ಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು.

ಲೈಂಗಿಕ ದೌರ್ಜನ್ಯಕ್ಕೆ ಒಳಗಾದ 18 ವರ್ಷದೊಳಗಿನ ಮಕ್ಕಳಿಗೆ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಪ್ರಥಮ ಪರಿಹಾರವಾಗಿ ರೂ.10,000 ಗಳನ್ನು ಕೂಡಲೇ ಮಂಜೂರು ಮಾಡತಕ್ಕದ್ದು.

ಕರ್ನಾಟಕ ಮಕ್ಕಳ ನಿಧಿಯಡಿ ಮಂಜೂರು ಮಾಡಬಹುದಾದ ಪರಿಹಾರ ಹಾಗೂ ಆರ್ಥಿಕ ಸಹಾಯದ ಮೊತ್ತಗಳ ವಿವರಗಳನ್ನು ಅನುಬಂಧ 1ರಲ್ಲಿ, ಅನುಬಂಧ-2ರಲ್ಲಿ ಮಾರ್ಗಸೂಚಿಗಳನ್ನು ಮತ್ತು ಅರ್ಜಿ ನಮೂನೆಯನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15-10-2014
(ಸರಸಾ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
ದೂರವಾಣಿ ಸಂಖ್ಯೆ:080-22032931

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560 001.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ / ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು.
3. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3), ವಿಧಾನಸೌಧ, ಬೆಂಗಳೂರು.
5. ಕರ್ನಾಟಕ ಮಕ್ಕಳ ನಿಧಿಯ ಅಧ್ಯಕ್ಷರು ಮತ್ತು ಸದಸ್ಯರು.
6. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು / ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ.
7. ಎಲ್ಲಾ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

(ಕ್ರಮ ಸಂಖ್ಯೆ: 3, 4, 5 ಮತ್ತು 6 ಸದಸ್ಯ ಕಾರ್ಯದರ್ಶಿಯವರ ಮುಖಾಂತರ)

**ಪ್ರತಿ:** 1)ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

2)ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.

ಸರ್ಕಾರಿ ಆದೇಶ ಸಂಖ್ಯೆ: ಮಮಇ 183 ಮಭಾಬ 2013, ದಿನಾಂಕ:15.10.2014ಕ್ಕೆ ಅನುಬಂಧ-1

ಕರ್ನಾಟಕ ಮಕ್ಕಳ ನಿಧಿಗೆ ಸಂಬಂಧಿಸಿದಂತೆ ಪರಿಹಾರದ ಗರಿಷ್ಠ ಮಿತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| ಕ್ರ ಸಂ | ಪರಿಹಾರದ ವಿವರಗಳು | ಪರಿಹಾರದ ಗರಿಷ್ಠ ಮಿತಿ |
|---|---|---|
| I | ಲೈಂಗಿಕ ದೌರ್ಜನ್ಯಕ್ಕೆ ಒಳಗಾದ 18 ವರ್ಷದೊಳಗಿನ ಮಕ್ಕಳಿಗೆ ಪರಿಹಾರ | |
| ಎ. | ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳಿಗೆ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ (ದೂರನ್ನು ಸ್ವೀಕರಿಸಿದ ಕೂಡಲೇ ಅಥವಾ ಆಸ್ಪತ್ರೆಗೆ ದಾಖಲಾದ ಕೂಡಲೇ) | ರೂ.10,000 |
| ಬಿ. | ಪ್ರಕರಣದ ಗಂಭೀರತೆಯ ಆಧಾರದ ಮೇಲೆ ವೈದ್ಯರ ಸಲಹೆ ಮೇರೆಗೆ ವೈದ್ಯಕೀಯ ಚಿಕಿತ್ಸೆಯನ್ನು ಮುಂದುವರೆಸಿದ ಸಂದರ್ಭದಲ್ಲಿ | ರೂ.75,000 ಗಳವರೆಗೆ ಅಥವಾ ವಾಸ್ತವಿಕವಾಗಿ ಭರಿಸಿದ ಮೊತ್ತ ಯಾವುದು ಕಡಿಮೆಯೋ ಅದು |
| ಸಿ. | ಆರೋಗ್ಯ ಸುಧಾರಣೆಗಾಗಿ ವೈದ್ಯರ ಶಿಫಾರಸ್ಸಿನ್ವಯ | ರೂ.15,000 |
| II | ಅರ್ಹ ಸಂಸ್ಥೆಯಲ್ಲಿರುವ ಮಕ್ಕಳಿಗೆ / ಮಕ್ಕಳ ಕಲ್ಯಾಣ ಸಮಿತಿ ಮೂಲಕ ದಾಖಲಾದ 18 ವರ್ಷದೊಳಗಿನ ಮಕ್ಕಳ ವೈದ್ಯಕೀಯ ಚಿಕಿತ್ಸೆಗಾಗಿ | |
| 1 | ಆಸ್ಪತ್ರೆ ಪ್ರವೇಶ ಶುಲ್ಕವನ್ನು ಒಳಗೊಂಡು ಸಣ್ಣ ಗಾಯಗಳಿಗೆ ವೈದ್ಯಕೀಯ ಮರುಪಾವತಿ | ರೂ.40,000 ಗಳವರಗೆ |
| 2 | ಆಸ್ಪತ್ರೆ ಪ್ರವೇಶ ಶುಲ್ಕವನ್ನು ಒಳಗೊಂಡು ಗಂಭೀರ ಗಾಯಗಳಿಗೆ ವೈದ್ಯಕೀಯ ಮರುಪಾವತಿ | ರೂ.1,00,000 ಗಳವರಗೆ |
| 3 | ಆಸ್ಪತ್ರೆಯಲ್ಲಿ ದಾಖಲಾದ ಸಂದರ್ಭದಲ್ಲಿ ತುರ್ತು ವೈದ್ಯಕೀಯ ಸೇವೆಗಳು | ರೂ.10,000 |
| 4 | ಅರ್ಹ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆ ಅಥವಾ ಸರ್ಜರಿ ಅಥವಾ ಸುಧಾರಿತ ಸರ್ಜರಿ ವೆಚ್ಚ ಪಾವತಿಸಲು. ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಮಾತ್ರ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸುತ್ತೋಲೆ ಪ್ರಕಾರ) | ರೂ.2,00,000 ಅಥವಾ ವೈದ್ಯರ ಶಿಫಾರಸ್ಸಿನ ಮೇಲೆ ಅಧ್ಯಕ್ಷರ ವಿವೇಚನೆ ಮೇರೆಗೆ ರೂ 5.00 ಲಕ್ಷದ ವರೆಗೆ. |
| III | ಸರ್ಕಾರದ ಬಾಲಮಂದಿರಗಳಲ್ಲಿ ಹಾಗೂ ಅರ್ಹ ಸಂಸ್ಥೆಗಳಲ್ಲಿ ದಾಖಲಾಗಿರುವ 18 ವರ್ಷದೊಳಗಿನ ಮಕ್ಕಳಿಗೆ ವೃತ್ತಿ ತರಬೇತಿ / ತಾಂತ್ರಿಕ ಶಿಕ್ಷಣ/ ಉನ್ನತ ಶಿಕ್ಷಣಕ್ಕೆ ಶುಲ್ಕ ಪಾವತಿ / ಮರುಪಾವತಿ | ವ್ಯವಸ್ಥಾಪಕ ಮಂಡಳಿ ನಿರ್ಧರಿಸಿದಂತೆ |
| IV | 18 ವರ್ಷ ಪೂರ್ಣಗೊಂಡು ಸರ್ಕಾರದ ಬಾಲಮಂದಿರ ಮತ್ತು ಅರ್ಹ ಸಂಸ್ಥೆ (ಸ್ವಯಂ ಸೇವಾ ಸಂಸ್ಥೆ) ಯಿಂದ ಬಿಡುಗಡೆಯಾಗಿ ವಿದ್ಯಾಭ್ಯಾಸ (ಕೋರ್ಸ್) ಪೂರ್ಣಗೊಳಿಸಲು ಅನುಪಾಲನಾ ಸೇವೆ ಮೂಲಕ ಆರ್ಥಿಕ ಬೆಂಬಲ ಒದಗಿಸುವುದು. | |
| V. | 18 ವರ್ಷ ಪೂರ್ಣಗೊಂಡು ಸರ್ಕಾರದ ಬಾಲಮಂದಿರ ಮತ್ತು ಅರ್ಹ ಸಂಸ್ಥೆ (ಸ್ವಯಂ ಸೇವಾ ಸಂಸ್ಥೆ) ಯಿಂದ ಬಿಡುಗಡೆಗೊಂಡ | ವ್ಯವಸ್ಥಾಪಕ ಮಂಡಳಿ ನಿರ್ಧರಿಸಿದಂತೆ |

| | | |
|---|---|---|
| | ಮಕ್ಕಳಿಗೆ ಸಿ.ಇ.ಟಿ ಯನ್ನೊಳಗೊಂಡು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಶುಲ್ಕ ಭರಿಸಲು | |
| VI. | ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಸರ್ಕಾರದ ಬಾಲಮಂದಿರದ ಹಾಗೂ ಅರ್ಹ ಸಂಸ್ಥೆಗಳ ಮಕ್ಕಳನ್ನು ಪ್ರೋತ್ಸಾಹಿಸಲು | |
| VII | POCSO Act, 2012ರಡಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ಗುರುತಿಸಿದ ಪಟ್ಟಿಯಿಂದ ನೇಮಿಸಲ್ಪಟ್ಟ ಭಾಷಾಂತರಕಾರರು / ವಿಶೇಷ ತಜ್ಞರು / ಸಮಾಲೋಚಕರು / ಗೌರವಧನ ಬೆಂಬಲ ಸೇವೆ ಒದಗಿಸುವವರಿಗೆ ಮತ್ತು ಇತರರ ಸೇವೆಗಳಿಗಾಗಿ ಶುಲ್ಕ ಪಾವತಿಸಲು | ಪ್ರತಿ ಪ್ರಕರಣಕ್ಕೆ ರೂ.1,000 |

15-10-2014

(ಸರಸಾ)

ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
ದೂರವಾಣಿ ಸಂಖ್ಯೆ:080-22032931

**ಸರ್ಕಾರಿ ಆದೇಶ ಸಂಖ್ಯೆ: ಮಮಇ 183 ಮಭಾಬ 2013, ದಿನಾಂಕ:15.10.2014ಕ್ಕೆ ಅನುಬಂಧ–2**

**ಮಾರ್ಗಸೂಚಿಗಳು**

1. 18 ವರ್ಷದೊಳಗಿನ ಮಕ್ಕಳಿಗೆ ಅನ್ವಯಿಸುತ್ತದೆ.
2. ದೌರ್ಜನ್ಯಕ್ಕೊಳಗಾದ ಮಕ್ಕಳಿಗೆ ಪರಿಹಾರ ನೀಡಲು, ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ / ಶಸ್ತ್ರಚಿಕಿತ್ಸೆಗಾಗಿ ನೀಡುವುದು.
3. ಮಕ್ಕಳ ಕಲ್ಯಾಣ ಸಮಿತಿಯ ಆದೇಶದನ್ವಯ ಅರ್ಹ ಸಂಸ್ಥೆಗಳಲ್ಲಿ ದಾಖಲಾಗಿರುವ
   (ಎ)ಮಕ್ಕಳ ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ / ಶಸ್ತ್ರಚಿಕಿತ್ಸೆಗಾಗಿ ನೀಡುವುದು.
   (ಬಿ)ಮಕ್ಕಳಿಗೆ ಪ್ರತಿಭೆ, ಹೆಚ್ಚಿನ ಶಿಕ್ಷಣಾಕ್ಕಾಗಿ, ಅಂತರ್‌ರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಲು ವೃತ್ತಿ ತರಬೇತಿಗಾಗಿ ಆರ್ಥಿಕ ಸಹಾಯ ಒದಗಿಸುವುದು.
4. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳ ಜಂಟಿ ಹೆಸರಿನಲ್ಲಿ ಜಿಲ್ಲಾ ಮಕ್ಕಳ ನಿಧಿ ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆರೆಯುವುದು. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ ಬಿಡುಗಡೆ ಮಾಡುವ ಅನುದಾನ ಹಾಗೂ ಸ್ಥಳೀಯವಾಗಿ ಸಂಗ್ರಹಿಸುವ ದೇಣಿಗೆಗಳನ್ನು ಸದರಿ ಖಾತೆಗೆ ಜಮಾ ಮಾಡುವುದು ಹಾಗೂ ಸೂಕ್ತ ಲೆಕ್ಕ ಪತ್ರ ನಿರ್ವಹಿಸುವುದು.
5. ಪಾಕ್ಸೋ ಕಾಯ್ದೆಯಡಿ, ದೌರ್ಜನ್ಯಕ್ಕೊಳಗಾದ ಮಗುವಿಗೆ, ಬೆಂಬಲ ಸಹಾಯಕರನ್ನು / ಸಮಾಲೋಚಕರನ್ನು / ಭಾಷಾಂತರಕಾರರನ್ನು / ತರ್ಜುಮೆದಾರರನ್ನು / ವಿಶೇಷ ತಜ್ಞರಿಗೆ ಗೌರವಧನ ಪಾವತಿ ಮಾಡುವುದು.
6. ಪರಿಹಾರ ಅಥವಾ ಆರ್ಥಿಕ ಸಹಾಯದ ಅರ್ಜಿಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸ್ವೀಕರಿಸುವುದು. ನಂತರ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳು ಪ್ರಸ್ತಾವನೆಯನ್ನು ಸಿದ್ದಪಡಿಸಿ, ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಪರಿಹಾರ ನೀಡುವುದು.
7. ಲೈಂಗಿಕ ದೌರ್ಜನ್ಯ ಅಥವಾ ಹಲ್ಲೆಗೊಳಗಾದ ಮಗುವಿಗೆ ಪ್ರಥಮ ಹಾಗೂ ತುರ್ತು ಚಿಕಿತ್ಸೆಗಾಗಿ ಅರ್ಜಿ ಸ್ವೀಕರಿಸಿದ 48 ಘಂಟೆ ಒಳಗೆ ಪ್ರಥಮ ಪರಿಹಾರ ರೂ.10,000 ಪಾವತಿಸಲು
8. ಹೆಚ್ಚಿನ ಚಿಕಿತ್ಸೆ ಹಾಗೂ ಇತರೆ ಆರ್ಥಿಕ ಸಹಾಯವನ್ನು ಅವಶ್ಯಕತೆಗೆ ಅನುಸಾರ ಹಾಗೂ ಅನುಬಂಧ 4ರಲ್ಲಿ ನಿಗದಿಪಡಿಸಿರುವ ಮಿತಿಗೆ ಒಳಪಟ್ಟು ಜಿಲ್ಲಾಧಿಕಾರಿಗಳು ಮಂಜೂರು ಮಾಡುವುದು. ಒಂದು ಲಕ್ಷಕ್ಕೆ ಮೀರಿದ ಪ್ರಕರಣಗಳನ್ನು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಗೆ ಸಲ್ಲಿಸುವುದು.
9. ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯು ನೀಡುವ ಮತ್ತು ಸ್ಥಳೀಯ ದೇಣಿಗೆಗಳನ್ನು ಜಿಲ್ಲಾ ಮಕ್ಕಳ ನಿಧಿಗೆ ಜಮಾ ಮಾಡುವುದು.

15-10-2014

(ಸರಸಾ)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
ದೂರವಾಣಿ ಸಂಖ್ಯೆ:080–22032931

ಸರ್ಕಾರಿ ಆದೇಶ ಸಂಖ್ಯೆ: ಮಮಇ 183 ಮಭಾಬ 2013, ದಿನಾಂಕ:15.10.2014ಕ್ಕೆ ಅನುಬಂಧ-3(1)

(ಈ ಅರ್ಜಿಯನ್ನು ಗುಲಾಬಿ ಬಣ್ಣದ ಪೇಪರ್‌ನಲ್ಲಿ ಮುದ್ರಿಸಿ ಅರ್ಜಿದಾರರಿಗೆ ನೀಡುವುದು)

ಅರ್ಜಿಯನ್ನು ಆಧರಿಸಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಗುವಿನ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಿದ್ಧಪಡಿಸುವ
ಪ್ರಥಮ ಮಾಹಿತಿ ವರದಿ

| ಕ್ರಮ ಸಂಖ್ಯೆ | ವಿವರ | |
|---|---|---|
| 1 | ಮಗುವಿನ ಹೆಸರು | |
| 2 | ಲಿಂಗ | |
| 3 | ವಯಸ್ಸು | |
| 4 | ತಂದೆ / ತಾಯಿಯಹೆಸರು<br>ಪೋಷಕರ ಹೆಸರು ಮತ್ತು ವಿಳಾಸ | |
| | ಉದ್ಯೋಗ | |
| | ವಾರ್ಷಿಕ ಆದಾಯ | |
| | ಘಟನೆ ನಡೆದ ದಿನಾಂಕ | |
| 5 | ದೌರ್ಜನ್ಯ ಕುರಿತು ಸಂಕ್ಷಿಪ್ತ ವರದಿ | ಲಗತ್ತಿಸುವುದು |
| 6 | ಪ್ರಕರಣವನ್ನು ಪೋಲೀಸ್ ಠಾಣೆಯಲ್ಲಿ ದಾಖಲಿಸಿದ ದಿನಾಂಕ | |
| 3 | ಎಫ್.ಐ.ಆರ್ | ಪೋಲಿಸ್ ಠಾಣೆಯಿಂದ ಪಡೆದು ಲಗತ್ತಿಸುವುದು |
| 4 | ಆಸ್ಪತ್ರೆಗೆ ದಾಖಲಾದ ದಿನಾಂಕ | |
| 5 | ವೈದ್ಯರ ಪ್ರಮಾಣ ಪತ್ರ | ಲಗತ್ತಿಸುವುದು |
| 6 | ಹೆಚ್ಚುವರಿ ಚಿಕಿತ್ಸೆ ಅಗತ್ಯತೆ (ವೈದ್ಯರ ಶಿಫಾರಸ್ಸು) | |
| 7 | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಶಿಫಾರಸ್ಸು | |

15.10.2014
(ಸರಸಾ)
ಸರ್ಕಾರದ ಅಧೀನ ಕಾರ್ಯದರ್ಶಿ-I,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
ದೂರವಾಣಿ ಸಂಖ್ಯೆ:080-22032931

149

ಸರ್ಕಾರಿ ಆದೇಶ ಸಂಖ್ಯೆ: ಮಮಇ 183 ಮಭಾಬ 2013, ದಿನಾಂಕ:15.10.2014ಕ್ಕೆ ಅನುಬಂಧ-3(2)

ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಪ್ರಥಮ ಮಾಹಿತಿ ವರದಿ ಶಸ್ತ್ರಚಿಕಿತ್ಸೆ / ಹೆಚ್ಚಿನ ವೈದ್ಯಕೀಯ ಚಿಕಿತ್ಸೆ

(ಆರೋಗ್ಯ ಇಲಾಖೆಯು ಗುರುತಿಸಿರುವ ಆಸ್ಪತ್ರೆಗಳಲ್ಲಿ ಅಥವಾ ಸರ್ಕಾರದ ಆಸ್ಪತ್ರೆಯಲ್ಲಿ ದಾಖಲಾದವರಿಗೆ ಮಾತ್ರ)

| ಕ್ರಮ ಸಂಖ್ಯೆ | ವಿವರ | |
|---|---|---|
| 1 | ಮಗುವಿನ ಹೆಸರು | |
| 2 | ಲಿಂಗ | |
| 3 | ವಯಸ್ಸು | |
| 4 | ತಂದೆ / ತಾಯಿಯಹೆಸರು<br>ಪೋಷಕರ ಹೆಸರು ಮತ್ತು ವಿಳಾಸ | |
| | ಉದ್ಯೋಗ | |
| | ವಾರ್ಷಿಕ ಆದಾಯ | |
| | ಯಾವ ಸ್ವರೂಪದ ಕಾಯಿಲೆ | |
| 5 | ವೈದ್ಯರ ವರದಿ | ಲಗತ್ತಿಸುವುದು |
| 6 | ಪ್ರಕರಣವನ್ನು ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ದಿನಾಂಕ (ಅಪಘಾತವಾಗಿದ್ದಲ್ಲಿ) | |
| 3 | ಎಫ್.ಐ.ಆರ್ | ಪೊಲೀಸ್ ಠಾಣೆಯಿಂದ ಪಡೆದು ಲಗತ್ತಿಸುವುದು |
| 4 | ಆಸ್ಪತ್ರೆಗೆ ದಾಖಲಾದ ದಿನಾಂಕ | |
| 5 | ವೈದ್ಯರ ಪ್ರಮಾಣ ಪತ್ರ | ಲಗತ್ತಿಸುವುದು |
| 6 | ಹೆಚ್ಚುವರಿ ಚಿಕಿತ್ಸೆ/ಶಸ್ತ್ರಚಿಕಿತ್ಸೆ ಅಗತ್ಯತೆ ಬಗ್ಗೆ (ವೈದ್ಯರ ಶಿಫಾರಸ್ಸು) | |
| 7 | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಶಿಫಾರಸ್ಸು | |

15.10.2014

(ಸರಸಾ)

ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
ದೂರವಾಣಿ ಸಂಖ್ಯೆ:080-22032931

148

ಸರ್ಕಾರಿ ಆದೇಶ ಸಂಖ್ಯೆ: ಮಮಇ 183 ಮಭಾಬ 2013, ದಿನಾಂಕ:15.10.2014ಕ್ಕೆ ಅನುಬಂಧ–3(3)

ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಪ್ರಥಮ ಮಾಹಿತಿ ವರದಿ
ಹೆಚ್ಚಿನ ಶಿಕ್ಷಣ/ಕ್ರೀಡೆ

| ಕ್ರಮ ಸಂಖ್ಯೆ | ವಿವರ | |
|---|---|---|
| 1 | ಮಗುವಿನ ಹೆಸರು | |
| 2 | ಲಿಂಗ | |
| 3 | ವಯಸ್ಸು | |
| 4 | ತಂದೆ / ತಾಯಿಯ ಹೆಸರು<br>ಪೋಷಕರ ಹೆಸರು ಮತ್ತು ವಿಳಾಸ | |
| 5 | ಉದ್ಯೋಗ | |
| 6 | ವಾರ್ಷಿಕ ಆದಾಯ | |
| 7 | ಯಾವ ಉದ್ದೇಶಕ್ಕಾಗಿ | |
| 8 | ಆಯ್ಕೆಯಾಗಿರುವ ಬಗ್ಗೆ ವರದಿ ಹಾಗೂ ಸಂಬಂಧಿಸಿದ ದಾಖಲೆಗಳು | |
| 9 | ತಗಲುವ ಅಂದಾಜು ವೆಚ್ಚ | |
| 10 | ಸಂಸ್ಥೆಗೆ ದಾಖಲಾಗಿರುವ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿ ಆದೇಶ ಸಂಖ್ಯೆ | |
| 11 | ಸಂಸ್ಥೆಯಲ್ಲಿ ವಾಸವಿರುವ ಅವಧಿ | |
| 12 | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಶಿಫಾರಸ್ಸು | |

15.10.2014
(ಸರಸಾ)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
ದೂರವಾಣಿ ಸಂಖ್ಯೆ:080–22032931